ಶ್ರೀ ಲಕ್ಷ್ಮೀನರಸಿಂಹಯ್ಯ.— ಕೆಲವು ಸಾರಿ ಹೀಗೆ ಆಗುತ್ತದೆ. ಕಳೆದ ಸಾರಿ ಮಾನ್ಯ ಬಿ. ಆರ್. ನೀಲಕಂಠಪ್ಪನವರು ಕೂಡ ಇಂತಹದ್ದೇ ವಿಚಾರವನ್ನು ಹೇಳಿದ್ದರು. ಆ ಮೇಲೆ ವಿಮರ್ಶೆಗೆ ಒಳಪಡಿಸಿದಾಗ ವಿಚಾರ ಏನೆಂಬುದು ತಿಳಿಯಲಾಯಿತು. ಈಗ ನಾನು ನನಗೆ ಸಿಕ್ಕಿರುವ ಮಾಹಿತಿ ಪ್ರಕಾರ ಈ ತಾಲ್ಲೂಕಿನಲ್ಲಿ ಬರತಕ್ಕಂಥಾದ್ದನ್ನು ಹೇಳಿದ್ದೇನೆ. ಒಂದು ವೇಳೆ ಮಾನ್ಯ ಸದಸ್ಯರು ಹೇಳುವ ರೀತಿಯಲ್ಲಿ ಆ ಹಳ್ಳಿಗಳು ಆ ತಾಲ್ಲೂಕಿನಲ್ಲಿ ಇಲ್ಲದಿದ್ದರೆ ಅವುಗಳನ್ನು ಕೈಬಿಟ್ಟು ಇರುವಂಥ ಹಳ್ಳಿಗಳಿಗೆ ವಿದ್ಯುದ್ದೀಕರಣ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಇನ್ನು ಎಲಪೂಳ ಗ್ರಾಮದ ವಿಚಾರ ಹೇಳಿದ್ದಾರೆ. ಅದು ಕಂದಾಯ ಗ್ರಾಮ. ಆದರೆ ಮುಳ್ಳಾಮಾರಿ ಕೆಳದಂಡೆ ಯೋಜನೆಯಡಿಯಲ್ಲಿ ಆ ಹಳ್ಳಿಯೂ ಮುಳುಗಡೆ ಆಗುತ್ತದೆ ಎಂಬ ದೃಷ್ಟಿಯಿಂದ ಮುಳುಗಡೆಯಾಗತಕ್ಕಂಥ ಗ್ರಾಮಗಳಿಗೆ ಯಾವುದೇ ಅಭಿವೃದ್ಧಿ ಕಾರ್ಯಗಳನ್ನು ಮಾಡಿದರೆ ಅದು ವೇಸ್ಟ್ ಆಗುತ್ತದೆ ಎಂದು ಕೈಬಿಡಲಾಗಿದೆ. ನೀವು ಹೇಳಿದ ಪ್ರಕಾರ ಅದು ಜನಗಣತಿ ಗ್ರಾಮವಾಗಿದೆ.

ಶ್ರೀ ಎಂ. ವೀರಯ್ಯಸ್ವಾಮಿ.— ಆ ಗ್ರಾಮಗಳು ಮುಳುಗಡೆಯೂ ಆಗುವುದಿಲ್ಲ, ಯಾವುದೇ ಅಭಿವೃದ್ಧಿಯೂ ಆಗುವುದಿಲ್ಲ. ನಿನ್ನೆ ತಾನು ಈ ಸದನದಲ್ಲಿ ಕೇಳಿದ ಪ್ರಶ್ನೆಗೆ ಮಾನ್ಯ ಸಚಿವರು ಮುಳ್ಳಾಮಾರಿ ಪ್ರಾಜೆಕ್ಟ್‌ನ್ನು ೨೦೦೦ನೇ ಎ.ಡಿ.ಗೊಳಗೆ ಮುಗಿಸುವ ಯತ್ನದಲ್ಲಿದ್ದೇವೆ ಎಂದು ಹೇಳಿದ್ದಾರೆ. ಅಂದರೆ ಅಲ್ಲಿಯವರೆಗೆ ಈ ಗ್ರಾಮಗಳು ಹಾಗೆಯೇ ಇರಬೇಕೇ ? ೧೯೭೨ರಲ್ಲಿ ಈ ಪ್ರಾಜೆಕ್ಟ್‌ನ ಕೆಲಸ ಪ್ರಾರಂಭವಾಗಿದೆ, ಅಲ್ಲಿಂದ ಇಲ್ಲಿಯವರೆಗೆ ಆ ಗ್ರಾಮಗಳಿಗೆ ವಿದ್ಯುತ್ ಸೌಕರ್ಯ ಕೊಟ್ಟಿಲ್ಲ. ಹಾಗಾದರೆ ಅವರು ಇನ್ನೂ ೧೨ ವರ್ಷಗಳವರೆಗೆ ಎಲ್ಲಾ ಸೌಲಭ್ಯಗಳಿಂದ ವಂಚಿತರಾಗಿ ಇರಬೇಕೇ ? ಆದುದರಿಂದ ಮುಳುಗಡೆಯಾಗುವವರಿಗೆ ಅವರಿಗೆ ವಿದ್ಯುತ್ ಸೌಲಭ್ಯವನ್ನು ಕೊಡಬೇಕೆಂದು ಒತ್ತಾಯ ಮಾಡುತ್ತೇನೆ. ಕೆ.ಇ.ಬಿ.ಯವರಿಂದ ಎಸ್ಟಿಮೇಟ್ ಮಂಜೂರು ಆಗಿದೆ. ಈಗ ತಮ್ಮ ಕಡೆಯಿಂದ ಆದೇಶ ಮಾತ್ರ ಬೇಕೆಂದು ಕಾಣುತ್ತದೆ. ಈಗ ಲಿಸ್ಟ್‌ನಲ್ಲಿ ಕೊಟ್ಟ ಹೆಸರುಗಳು ಜಗತ್ತಿನಲ್ಲಿ ಎಲ್ಲಿಯೂ ಇಲ್ಲ. ಮುಳುಗಡೆ ಆಗುವ ಪ್ರದೇಶಗಳಿಗೆ ವಿದ್ಯುತ್ ಕೊಡುವುದಿಲ್ಲ ಎಂದಾದರೆ ಬೆಣ್ಣೆತೊರೆ ಯೋಜನೆಯಡಿಯಲ್ಲಿ ಮುಳುಗಡೆಯಾಗುವ ಹೆರಾರು, ಕಾಮಕನಾತಾ ಎಂಬ ಹಳ್ಳಿಗಳಿಗೆ ಹೇಗೆ ಕೊಟ್ಟಿರಿ ? ಆಮೇಲೆ, ಮುಳುಗಡೆಯಾಗುವುದು ಇನ್ನು ೨೦ ವರ್ಷಗಳ ನಂತರ ಎನ್ನುವುದಾದರೆ ಅಲ್ಲಿಯವರೆಗೆ ಆ ಹಳ್ಳಿಯವರೆಲ್ಲ ಅಂಧಕಾರದಲ್ಲಿರಬೇಕೇ ?

ಶ್ರೀ ಲಕ್ಷ್ಮೀನರಸಿಂಹಯ್ಯ.— ಈಗ ಇರುವ ನಿಯಮಾವಳಿ ಪ್ರಕಾರ ಹಾಗೆ ಮಾಡಲು ಬರುವುದಿಲ್ಲ. ನಿಜವಾಗಿಯೂ ಎಲ್ಲಿ ಹತ್ತಾರು ವರ್ಷಗಳು ತಡವಾಗುವುದೋ ಅಂಥಾ ಕಡೆ ವಿದ್ಯುತ್ತನ್ನು ಒದಗಿಸೋಣ.

ಪುನರ್ ವಸತಿ ಪ್ರದೇಶಕ್ಕೆ ವಿದ್ಯುತ್ ಸರಬರಾಜು

೧೯೭೭. ಶ್ರೀ ಬಿ. ಸ್ವಾಮಿರಾವ್ (ಹೊಸನಗರ).—ಮಾನ್ಯ ವಿದ್ಯುತ್ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಶಿವಮೊಗ್ಗ ತಾಲ್ಲೂಕು ಶೆಟ್ಟಿಹಳ್ಳಿ ಮುಳುಗಡೆ ನಿರಾಶ್ರಿತರ ಪುನರ್‌ವಸತಿ ಪ್ರದೇಶಕ್ಕೆ ವಿದ್ಯುಚ್ಛಕ್ತಿ ಒದಗಿಸಲು ಪರವಾನಿಗೆ ಕೇಲಾಗಿರುವುದು ನಿಜವೇ ?

ಆ) ಹಾಗಿದ್ದಲ್ಲಿ ಶೆಟ್ಟಿಹಳ್ಳಿಗೆ ವಿದ್ಯುತ್ ತಂತಿ ಎಳೆಯಲು ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ರಾಜ್ಯ ಮಂತ್ರಿಗಳು).—

ಅ) ನಿಜ.

ಆ) ೧೦ ಕಿ. ಮೀ. ಉದ್ದದ ತಂತಿಯನ್ನು ಎಳೆಯಬೇಕಾಗಿದೆ. ಇದರಲ್ಲಿ ೪ ಕಿ. ಮೀ. ಲೈನ್ ಅರಣ್ಯದಲ್ಲಿ ಹಾದು ಹೋಗುತ್ತದೆ. ಈಗ ೬ ಕಿ. ಮೀ. ಉದ್ದದ ಪ್ರದೇಶಕ್ಕೆ ಕಂಬಗಳನ್ನು

ಹಾಕೆಲಾಗಿದೆ. ಅರಣ್ಯ ಭಾಗದಲ್ಲಿ ಲೈನ್ ಎಳೆಯಲು ಅರಣ್ಯ ಇಲಾಖೆಯ ಅನುಮತಿಯನ್ನು ಕೋರಲಾಗಿದೆ.

ಶ್ರೀ ಬಿ. ಸ್ವಾಮಿರಾವ್.—ಅಧ್ಯಕ್ಷರೇ, ಎಳೆಯಬೇಕಾದ ೧೦ ಕಿಲೋಮೀಟರ್ ಅಂತರದಲ್ಲಿ ಇವರು ಪರ್ಮಿಷನ್ ತೆಗೆದುಕೊಳ್ಳದೆ ಳಿ ಕಿಲೋಮೀಟರ್‌ಗೆ ಹೇಗೆ ಎಳೆದರು ? ಅರಣ್ಯ ಇಲಾಖೆಯವರ ಪರ್ಮಿಷನ್ನು ಎಷ್ಟು ದಿವಸದಿಂದ ಕೇಳುತ್ತಿದ್ದಾರೆ, ಅವರು ಏಕೆ ಅನುಮತಿ ಕೊಡುತ್ತಿಲ್ಲ ? ಅಲ್ಲದೆ, ಪರವಾನಿಗೆ ಮೊದಲೇ ಪಡೆಯದೆ ಅಂಥಾ ಸ್ಥಳದಲ್ಲಿ ಊರಿನ ನಿರ್ಮಾಣ ಏಕೆ ಮಾಡಿದರು ಎಂದು ಹೇಳಬೇಕು ?

ಶ್ರೀ ಜೆ. ಹೆಚ್. ಪಟೇಲ್ (ವಿದ್ಯುತ್ ರಾಜ್ಯ ಮಂತ್ರಿಗಳ ಪರವಾಗಿ).—ಒಂದೊವರೆ ವರ್ಷದ ಹಿಂದೆ ಬಂದಿರುವ ಕೇಂದ್ರದ ಕಾನೂನು ಪ್ರಕಾರ ಯಾವುದೇ ಅರಣ್ಯದಲ್ಲಿ ಕೆಲಸ ಮಾಡಬೇಕಾದರೂ ಅದು ಕಂಬ ನೆಡುವುದಕ್ಕಾಗಲೀ ಅಥವಾ ರಸ್ತೆ ಮಾಡುವುದಕ್ಕಾಗಲೀ ಒಂದು ಮರವನ್ನೂ ಡ್ಯಾಮೇಜ್ ಮಾಡುವ ಹಾಗಿಲ್ಲ. ಆದ್ದರಿಂದ ಅರಣ್ಯ ಇಲಾಖೆಯವರು ಕಠೋರವಾಗಿ ವರ್ತಿಸಿ ವಿದ್ಯುತ್ ಇಲಾಖೆ ನೌಕರರನ್ನು ಕಾಡಿನೊಳಕ್ಕೆ ಬಿಡುತ್ತಿಲ್ಲ. ಹಾಗಾದರೆ ಏಕೆ ಎಳೆಸಿದರಿ ಎಂದರೆ ನಾಲ್ಕು ಕಿಲೋ ಮೀಟರ್ ಬೇಕಾದರೆ ಅದನ್ನು ತೆಗೆಸಿಬಿಡುತ್ತೇನೆ. ಅಲ್ಲಿರುವುದು ರಿಸರ್ವ್ ಫಾರೆಸ್ಟ್. ಯಾವುದೋ ಕಾಲದಲ್ಲಿ ನಿರಾಶ್ರಿತರಿಗೆ ಅಲ್ಲಿಮನೆ ಕಟ್ಟಿಕೊಳ್ಳಲು ಸ್ಥಳಕೊಟ್ಟುಬಿಟ್ಟರು. ಅಲ್ಲಿ ಈಗ ರಸ್ತೆನೂ ಇಲ್ಲ. ವಿದ್ಯುತ್ತೂ ಇಲ್ಲ. ನಿಜವಾದ ಅರ್ಥದಲ್ಲಿ ಅಲ್ಲಿರುವವರು ಕಾಡುಜನರೇ ಆಗಿಬಿಟ್ಟಿದ್ದಾರೆ, ಪಾಪ. ನಾವು ಅರಣ್ಯ ಇಲಾಖೆಯವರಿಗೆಪಾಹನ ಓಡಾಡಲು ರಸ್ತೆಗಾಗಿ ಮತ್ತು ಅಲ್ಲೇ ಪಕ್ಕದಲ್ಲಿ ಕಂಬ ನೆಡಲಿಕ್ಕಾಗಿ ಸ್ವಲ್ಪ ಅರಣ್ಯ ಕಡಿಯಲು ನಾವು ಪರ್ಮಿಷನ್ ಕೇಳಿದ್ದೇವೆ.

ಶ್ರೀ ಆರ್. ವೆಂಕಟರಾವಯ್ಯ.—ಎಲೆಕ್ಟ್ರಿಸಿಟಿ ಪ್ರಾವಿಷನಲ್‌ನಲ್ಲೇ ಇದಕ್ಕೆಲ್ಲ ಪರಿಹಾರ ಇದೆಯಲ್ಲ ಸ್ವಾಮಿ ?

ಶ್ರೀ ಬಿ. ಸ್ವಾಮಿರಾವ್.—ಅಧ್ಯಕ್ಷರೇ, ಅರಣ್ಯದ ಮಧ್ಯೆ, ಇರುವ ಅನೇಕ ಹಳ್ಳಿಗಳಿಗೆ ಈಗಾಗಲೇ ವಿದ್ಯುತ್ತೆ ಕೊಟ್ಟಾಗಿದೆ. ಶಿವಮೊಗ್ಗ ತಾಲ್ಲೂಕಿನ ಕೆಳಘಟ್ಟ ಮತ್ತು ಕತ್ತಳ್ಳಿಗಳಿಗೆ ಕೊಟ್ಟಿದ್ದಾರೆ. ಯಾವುದಕ್ಕೂ ಪರವಾನಿಗೆ ಪಡೆದಿಲ್ಲ. ಇದರ ಬಗ್ಗೆ ಜಿಲ್ಲಾ ಪರಿಷತ್ ಮೀಟಿಂಗ್‌ಗೆ ಬಂದು ವಿವರಣೆ ಕೊಡಲು ಅರಣ್ಯ ಇಲಾಖೆ ಅಧಿಕಾರಿಗಳಿಗೆ ಹೇಳಿವಾರೂ ಬಾರಿ ಸೂಚಿಸಿದ್ದರೂ ಅವರು ಮೀಟಿಂಗ್‌ಗೆ ಬರುವ ಸೂಚನೆಯನ್ನೇ ಕೊಡಲಿಲ್ಲ ಅಥವಾ ಕಾರಣವನ್ನೂ ತಿಳಿಸಿಲ್ಲ. ಇದು ಸರ್ಕಾರಕ್ಕೆ ಅವರ ಮೇಲೆ ಇರುವ ಹಿಡಿತದ ಲಕ್ಷಣವೇ ? ಈ ಅಧಿಕಾರಿಗಳು ಬಹಳ ದಿಟ್ಟತನದಿಂದ ಬಹಳ ಉದ್ಧಟತನದಿಂದ ಜಿಲ್ಲಾ ಪರಿಷತ್ತಿನ ಸಭೆಗೆ ಬಂದಿಲ್ಲ ಮತ್ತು ಒಂದು ದಿವಸ ಕೂಡ ಅಲ್ಲಿ ಬಂದು ಉತ್ತರ ಕೊಟ್ಟಿಲ್ಲ. ಅದು ಅವರಿಗೂ ಗೊತ್ತಿದೆ. ವಿದ್ಯುಚ್ಛಕ್ತಿ ಇಲಾಖೆಯವರಂ ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡಿದ್ದಾರೆ. ಆದರೆ ಅರಣ್ಯ ಇಲಾಖೆಯ ಅಧಿಕಾರಿಗಳು ಬಂದಿಲ್ಲ. ಏತಕ್ಕೆ ಅವರು ಬಂದಿಲ್ಲ ? ಅವರು ನಿಮ್ಮ ಹಂತೋಟಿಯಲ್ಲಿದ್ದಾರೋ ಇಲ್ಲವೋ ? ಅವರು ನಿಮ್ಮ ಸರ್ಕಾರದ ಅಧೀನದಲ್ಲಿದ್ದಾರೆಯೋ ಇಲ್ಲವೋ ಎಂಬ ಸಂಶಯ ಬಂದಿದೆ. ಇದಕ್ಕೆ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕು ? ಹಾಗೂ ಆ ಅಧಿಕಾರಿಗಳನ್ನು ಇಲ್ಲಿಗೆ ಕರೆಸಬೇಕು.

ಶ್ರೀ ಜೆ. ಹೆಚ್. ಪಟೇಲ್.—ಅರಣ್ಯ ಇಲಾಖೆಯ ಅಧಿಕಾರಿಗಳು ನಮ್ಮ ಹತೋಟಿಯಲ್ಲಿದ್ದಾರೆಯೇ ಅಥವಾ ಇಲ್ಲವೇ ಎಂಬುದು ನನಗೆ ಗೊತ್ತು, ಮತ್ತು ಅವರಿಗೂ ಕೂಡ ಗೊತ್ತು. ಮಾನ್ಯ ಸದಸ್ಯರ ಎದುರಿಗೇ ಅಧಿಕಾರಿಗಳನ್ನು ಕರೆಯಬೇಕೆಂದೂ ನಿಯಮ ಇಲ್ಲ. ಅಧಿಕಾರಿಗಳನ್ನು ಕರೆಸಿದ್ದೇನೆ. ಡಿ.ಎಫ್.ಓ. ಅನ್ನು ಕರೆಸಿ ಮಾತನಾಡಿದ್ದೇನೆ. ರಾಜ್ಯ ಮಟ್ಟದಲ್ಲಿ ಕೆಲಸ ಮಾಡತಕ್ಕಂತಹ ಅಧಿಕಾರಿಗಳಿಗೆ ಸ್ವಾತಂತ್ರ್ಯವಿಲ್ಲ. ಇದು ಮಾನ್ಯ ಪಿಗೆರೆಯವರಿಗೂ ಗೊತ್ತಿರಬಹುದು. They are just incapable of doing anything..... ಎಲ್ಲದಕ್ಕೂ ಅವರ ಪರ್ಮಿಷನ್ ಬೇಕು. ಒಂದು ಉದಾಹರಣೆಯನ್ನು ಹೇಳುತ್ತೇನೆ. ಸಿರಿಗೆರೆ ಗುಡ್ಡದ ಮೇಲೆ ಟೆಲಿಫೋನ್ ಕನೆಕ್ಷನ್ ಅನ್ನು ಇಂಪ್ರೂವ್ ಮಾಡುವುದಕ್ಕಾಗಿ ಒಂದು ಸಣ್ಣ ಯಂತ್ರವನ್ನು ಅಳವಡಿಸಬೇಕೆಂದು ಮತ್ತು ಅದಕ್ಕಾಗಿ ಒಂದು ಸ್ಕೆಚ್ಚರ್ ಹೆಕ್ಟೇರ್ ಅನ್ನು ಕೊಡಿ ಎಂದು ಹೇಳಿದರೆ ಅರಣ್ಯ ಇಲಾಖೆಯವರ ಪರ್ಮಿಷನ್ ಇಲ್ಲದಿದ್ದರೆ ಕೊಡುವುದಿಲ್ಲವೆಂದು ಹೇಳುತ್ತಾರೆ. ಕೆಲವು ತೊಂದರೆ ಇದ್ದೆ. ಶೆಟ್ಟಿ

ಹಳ್ಳಿ ಗ್ರಾಮಕ್ಕೆ ದೀಪ ಕೊಡುವುದು ಎಷ್ಟು ಅವಶ್ಯಕವೆಂದು ಗೊತ್ತಿದೆ. ನಾನು ಸ್ವತಃ ಹೋಗಿ ನೋಡಿದ್ದೇನೆ. ಆದಷ್ಟು ಬೇಗ ಪ್ರಯತ್ನ ಮಾಡುತ್ತೇನೆ.

ಶ್ರೀ ಬಿ. ಸ್ವಾಮಿರಾವ್.—ಈಗಾಗಲೇ ಎರಡು ವರ್ಷವಾಗಿದೆ. ಅಲ್ಲಿ ಮುಳುಗಡೆ ರೈತರಿದ್ದಾರೆ. ರಸ್ತೆ ಇದೆ. ಒಂದು ತಂತಿ ತೆಗೆದುಕೊಂಡು ಹೋಗುತ್ತೇವೆಂದು ಹೇಳಿದರೂ ಪರವಾನಗಿ ಕೊಡಲಿಲ್ಲ. ಈ ಕೆಲಸವನ್ನು ಎಷ್ಟು ದಿವಸದಲ್ಲಿ ಮಾಡುತ್ತೀರಿ ಎಂಬುದನ್ನು ಹೇಳಬೇಕು.

ಶ್ರೀ ಜೆ. ಹೆಚ್. ಪಟೀಲ್.—ಆದಷ್ಟು ಬೇಗ ಎಂದು ಕನ್ನಡದಲ್ಲಿ ಹೇಳಿದ್ದೇನೆ.

ಶ್ರೀ ಬಿ. ಸ್ವಾಮಿರಾವ್.—ಆದಷ್ಟು ಬೇಗ ಎನ್ನುವುದಕ್ಕೆ ಅರ್ಥವೇ ಇಲ್ಲ. ಎಲ್ಲಾ ಪ್ರಶ್ನೆಗಳಿಗೂ ಆದಷ್ಟು ಬೇಗ ಎಂದು ಹೇಳಿದರೆ ಅದಕ್ಕೆ ಅರ್ಥವಿಲ್ಲ.

ಅಧ್ಯಕ್ಷರು.—ತಾವು ಭರವಸೆಗಳ ಸಮಿತಿಯ ಸದಸ್ಯರಿದ್ದೀರಿ. ಎಂಟು ದಿವಸಕ್ಕೊಮ್ಮೆ ಮೀಟಿಂಗ್ ಕರೆದು ಯಾವ್ಯಾವ ಭರವಸೆಗಳು ಪೆಂಡಿಂಗ್ ಇದೆ ಎಂದು ವಿಚಾರಿಸಿ.

ಈಗ ಶ್ರೀ ಪ್ರತಾಪ ಚಂದ್ರಶೆಟ್ಟಿಯವರ ಪ್ರಶ್ನೆಯನ್ನು ಶ್ರೀ ಬಿ.ಎಂ. ಇದ್ದಿನಬ್ಬನವರು ಕೇಳಬಹುದು.

ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮದ ಬಗ್ಗೆ

೧೯೬೫. ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ).—ಮಾನ್ಯ ಬಂದರು ಹಾಗೂ ಮೀನುಗಾರಿಕೆ ಮತ್ತು ಸಣ್ಣ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದ ಕರಕುಶಲ ಅಭಿವೃದ್ಧಿ ನಿಗಮವು ವಿದೇಶಿ ನೆರವಿನೊಂದಿಗೆ ಎಷ್ಟು ಯೋಜನೆಗಳನ್ನು ಕೈಗೊಂಡಿದೆ (ಇದಕ್ಕಾಗಿ ವೆಚ್ಚ ಮಾಡಿದ ಹಣ ಹಾಗೂ ಯೋಜನೆಯ ವಿವರಗಳನ್ನು ಒಜನೆಸುವುದು)

ಆ) ಯೋಜನೆಯ ಕಾರ್ಯಗತಗೊಳಿಸುವ ಸಂದರ್ಭದಲ್ಲಿ ಕುಶಲಕರ್ಮಿಗಳಿಗೆ ಸಮರ್ಪಕವಾಗಿ ಕಚ್ಚಾ ವಸ್ತುಗಳು ದೊರೆಯುವ ವಿಷಯದಲ್ಲಿ ಮಾಡಲಾಗಿದೆಯೇ ?

ಇ) ಈ ಯೋಜನೆಯನ್ನು ಜಾರಿಗೊಳಿಸುವ ಸಂದರ್ಭದಲ್ಲಿ ಎಷ್ಟು ಆರ್ಥಿಕ ಅವ್ಯವಹಾರದ ಪ್ರಕರಣಗಳು ಸರ್ಕಾರದವರ ಗಮನಕ್ಕೆ ಬಂದಿದೆ ?

ಶ್ರೀ ಎಂ ರಘುಪತಿ (ಬಂದರು ಹಾಗೂ ಮೀನುಗಾರಿಕೆ ಮತ್ತು ಸಣ್ಣ ಕೈಗಾರಿಕೆ ಸಚಿವರು).—

ಅ) ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮವು ವಿದೇಶಿ ನೆರವಿನೊಂದಿಗೆ ಎರಡು ಯೋಜನೆಗಳನ್ನು ಕೈಗೊಂಡಿದೆ. ಅವು ಡಚ್ ಯೋಜನೆ ಮತ್ತು ನೊರಾಡ್ ಯೋಜನೆ. ಇದಕ್ಕಾಗಿ ವೆಚ್ಚ ಮಾಡಿದ ಹಣದ ವಿವರ ಈ ಕೆಳಗಿನಂತಿದೆ.

	ಲಕ್ಷ ರೂ. ಗಳಲ್ಲಿ
ಡಚ್ ಯೋಜನೆ	೧೯೯.೪೮
ನೊರಾಡ್ ಯೋಜನೆ	೨.೨೫

ಡಚ್ ಯೋಜನೆಯಡಿಯಲ್ಲಿ ೩೮೦ ವಾಸದ ಮನೆ ಹಾಗೂ ೪ ಕಾರ್ಯಾಗಾರಗಳನ್ನು ಕಟ್ಟಿದೆ ನೊರಾಡ್ ಯೋಜನೆಯಡಿಯಲ್ಲಿ ೫ ತರಬೇತಿಯ ಕೇಂದ್ರಗಳನ್ನು ಸ್ಥಾಪಿಸಿದೆ.

ಆ) ಹೌದು

ಇ) ಯಾವುದೂ ಇಲ್ಲ.

ಶ್ರೀ ಬಿ. ಎಂ. ಇದಿನಬ್ಬ.—ಡಚ್ ಯೋಜನೆಯಡಿಯಲ್ಲಿ ೩೮೦ ವಾಸದ ಮನೆ ಹಾಗೂ ೪ ಕಾರ್ಯಾಗಾರಗಳನ್ನು ಕಟ್ಟಿದೆ. ನೊರಾಡ್ ಯೋಜನೆಯಡಿಯಲ್ಲಿ ೫ ತರಬೇತಿ ಕೇಂದ್ರಗಳನ್ನು ಸ್ಥಾಪಿಸಿದೆ.